## ಕರ್ನಾಟಕ ಸರ್ಕಾರ

ಸಂಖ್ಯೆ:-ಆಇ 295 ಪಿಇಎನ್1 2010

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ:-17.07.2014.

## ಅಧಿಕೃತ ಜ್ಞಾಪನ

ವಿಷಯ:- ಕಾಣೆಯಾದ ಸರ್ಕಾರಿ ನೌಕರರ ವಾರಸುದಾರರಿಗೆ/ ಕುಟುಂಬಕ್ಕೆ ಕುಟುಂಬ ಪಿಂಚಣಿ ನೀಡುವ ಬಗ್ಗೆ.

ಉಲ್ಲೇಖ:- ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ:- ಆಇ 11 ಕುವಿವೇ 87, ದಿನಾಂಕ:-21.03.1988.

---

ಸರ್ಕಾರದ ಅಧಿಕೃತ ಜ್ಞಾಪನ ಸಂಖ್ಯೆ:-ಆಇ (ವಿ) 11 ಪಿಇಟಿ 87, ದಿನಾಂಕ:-21.03.1988ರಲ್ಲಿ ಕಾಣೆಯಾದ ಸರ್ಕಾರಿ ನೌಕರರ ವಾರಸುದಾರರಿಗೆ/ಕುಟುಂಬಕ್ಕೆ ವಿಶ್ರಾಂತಿ ವೇತನ/ಕುಟುಂಬ ವಿಶ್ರಾಂತಿ ವೇತನವನ್ನು ಹಲವು ಷರತ್ತುಗಳಿಗೊಳಪಟ್ಟು ಮಂಜೂರು ಮಾಡುವ ಬಗ್ಗೆ ಇರುತ್ತದೆ.

ಕಾಣೆಯಾದ ಸರ್ಕಾರಿ ನೌಕರನ ಕುಟುಂಬವು, ಭಾರತೀಯ ಸಾಕ್ಷ್ಯ ಕಾಯ್ದೆಯ ಸೆಕ್ಷನ್ 108 ರನ್ವಯ ಕಾಣೆಯಾದ ನೌಕರನ ಸಿವಿಲ್ ಡೆತ್ ಸಂಬಂಧದಲ್ಲಿ ನ್ಯಾಯಾಲಯದ ಡಿಕ್ರಿ/ಆದೇಶ ಪಡೆದಿರುವ ಪ್ರಕರಣಗಳಲ್ಲಿ ಅಂತಹ ಪ್ರಕರಣಗಳನ್ನು ನಿಯತಗೊಳಿಸುವುದು ಒಳಗೊಂಡಂತೆ ಈ ಕೆಳಕಂಡ ಅಂಶಗಳು ಪರಿಶೀಲನಾರ್ಹವಾಗಿದೆ.

1. ಕಾಣೆಯಾದ ಸರ್ಕಾರಿ ನೌಕರನ ಕುಟುಂಬಕ್ಕೆ ಕುಟುಂಬ ಪಿಂಚಣಿ ಸೌಲಭ್ಯವನ್ನು ಕಾಣೆಯಾದ ದಿನಾಂಕದಿಂದ ಅಥವಾ ನ್ಯಾಯಾಲಯದ ಡಿಕ್ರಿ/ ಆದೇಶದನ್ವಯ ಭಾವಿಸುವ ಮರಣದ ದಿನಾಂಕದಿಂದ ನೀಡಬಹುದೇ? ಈ ಎರಡು ದಿನಾಂಕಗಳು ಬೇರೆ ಬೇರೆಯಾದ ಪ್ರಕರಣಗಳಲ್ಲಿ, ಈ ವ್ಯತ್ಯಾಸದ ಅವಧಿಯನ್ನು ನಿಯತಗೊಳಿಸುವುದು.

2\. ಹಾಗೂ ದಿನಾಂಕ:-21.03.1988ರ ಅಧಿಕೃತ ಜ್ಞಾಪನದಲ್ಲಿನ ಉಪಬಂಧಗಳನ್ವಯ ಸರ್ಕಾರಿ ನೌಕರನು ಕಾಣೆಯಾದ ದಿನಾಂಕದಿಂದ ಒಂದು ವರ್ಷದ ನಂತರ ಕುಟುಂಬ ಪಿಂಚಣಿಯನ್ನು ಬಿಡುಗಡೆ ಗೊಳಿಸಬೇಕೆಂದಿರುತ್ತದೆ ಮತ್ತು ಈ ಒಂದು ವರ್ಷವನ್ನು ಅಸಾಧಾರಣ ರಜೆಯನ್ನಾಗಿ ಪರಿಗಣಿಸಬೇಕೆಂದು ಹಾಗೂ ಕರ್ನಾಟಕ ನಾಗರೀಕ ಸೇವಾ ನಿಯಮಗಳ ನಿಯಮ-244-ಎ ರನ್ವಯ ಈ ಅವಧಿಯನ್ನು ಅರ್ಹತಾದಾಯಕ ಸೇವೆಯನ್ನಾಗಿ ಪರಿಗಣಿಸಬೇಕಾಗುತ್ತದೆ. ಆದರೆ,ಪ್ರಶ್ನಿತ ಪ್ರಕರಣ ಗಳಲ್ಲಿ ಅಂದರೆ ಮೊದಲು ದಿನಾಂಕ:-21.03.1988ರ ಅಧಿಕೃತ ಜ್ಞಾಪನದನ್ವಯ ಇತ್ಯರ್ಥಗೊಂಡ ಪ್ರಕರಣಗಳಲ್ಲಿ ನಂತರ ಸೇವೆಯಲ್ಲಿರುವಾಗಲೇ ಮರಣಹೊಂದಿದ ಪ್ರಕರಣಗಳೆಂದು ಪರಿಗಣಿಸುವಲ್ಲಿ, ಈ ಅವಧಿಯ ಪರಿಗಣನೆಯ ಕುರಿತು.

ರಾಜ್ಯ ಸರ್ಕಾರವು ಮೇಲ್ಕಂಡ ಅಂಶಗಳೂ ಒಳಗೊಂಡಂತೆ ವಿಷಯವನ್ನು ಪರಿಶೀಲಿಸಿ ಈ ಕೆಳಕಂಡಂತೆ ಸ್ಪಷ್ಟೀಕರಿಸಿದೆ:

ದಿನಾಂಕ:-21.03.1988ರ ಅಧಿಕೃತ ಜ್ಞಾಪನದ ಉಪಬಂಧಗಳಲ್ಲಿ ಕಾಣೆಯಾದ ಸರ್ಕಾರಿ ನೌಕರನ ಕುಟುಂಬದವರಿಗೆ ಕುಟುಂಬ ಪಿಂಚಣಿಯನ್ನು ಆತನು ಕಾಣೆಯಾದ ದಿನಾಂಕದಿಂದ ಮಂಜೂರು ಮಾಡಲು ಅವಕಾಶವಿರುವುದಿಲ್ಲ. ಪ್ರಾರಂಭಿಕವಾಗಿ ಅಂತಹ ಎಲ್ಲಾ ಪ್ರಕರಣಗಳಲ್ಲಿ ಎಲ್ಲಿ ಸರ್ಕಾರಿ ನೌಕರನು ಸೇವೆಯಲ್ಲಿರುವಾಗಲೇ ಕಾಣೆಯಾಗಿರುತ್ತಾನೋ, ಅಂತಹ ಕುಟುಂಬದವರಿಗೆ ದಿನಾಂಕ:-21.03.1988ರ ಅಧಿಕೃತ ಜ್ಞಾಪನದನ್ವಯ ಸರ್ಕಾರಿ ನೌಕರನು ಕಾಣೆಯಾದ ದಿನಾಂಕದಿಂದ ಒಂದು ವರ್ಷದ ನಂತರ ಕುಟುಂಬ ಪಿಂಚಣಿ ಸೌಲಭ್ಯಗಳನ್ನು ಮಂಜೂರು ಮಾಡಬೇಕಾಗುತ್ತದೆ ಮತ್ತು ಈ ಅವಧಿಯನ್ನು ಅಸಾಧಾರಣ ರಜೆಯನ್ನಾಗಿ ಪರಿಗಣಿಸಬೇಕಾಗುತ್ತದೆ.

ಕುಟುಂಬವು ನ್ಯಾಯಾಲಯದ ಡಿಕ್ರಿಯನ್ನು ಭಾರತೀಯ ಸಾಕ್ಷ್ಯ ಕಾಯ್ದೆಯ ಸೆಕ್ಷನ್ 108 ರನ್ವಯ ಪಡೆದಿರುವ ಮತ್ತು ಡಿಕ್ರಿಯ ದಿನಾಂಕಕ್ಕೆ ಸಂಬಂಧಿತ ಕಾಣೆಯಾದ ನೌಕರನು ವಯೋನಿವೃತ್ತಿ ವಯಸ್ಸನ್ನು ತಲುಪದಿರುವಂತಹ ಪ್ರಕರಣಗಳಲ್ಲಿ, ಆತನು ಸೇವೆಯಲ್ಲಿರುವಾಗಲೇ ನಿಧನ ಹೊಂದಿರುವುದಾಗಿ ಭಾವಿಸತಕ್ಕದ್ದು. ಆದ್ದರಿಂದ, ನ್ಯಾಯಾಲಯದ ಡಿಕ್ರಿಯ ದಿನಾಂಕಕ್ಕೆ ಕಾಣೆಯಾದ ಸರ್ಕಾರಿ ನೌಕರನು ವಯೋನಿವೃತ್ತಿ ದಿನಾಂಕವನ್ನು ತಲುಪದಿರುವ ವರ್ಗದ ಪ್ರಕರಣಗಳಲ್ಲಿ ಮಾತ್ರವೇ ಸೇವೆಯಲ್ಲಿರುವಾಗಲೇ ನಿಧನ ಹೊಂದಿರುವ ಪ್ರಕರಣವೆಂದು ಪರಿಗಣಿಸಿ ನಿವೃತ್ತಿ ವೇತನ ಸೌಲಭ್ಯಗಳನ್ನು ಪರಿಷ್ಕರಿಸತಕ್ಕುದು. ಮೇಲಿನ ಸಂದರ್ಭದಿಂದಾಗಿ, ಡಿಕ್ರಿಯ ಆಧಾರದ ಮೇರೆಗೆ ಕುಟುಂಬಕ್ಕೆ ಸೌಲಭ್ಯ ಗಳನ್ನು ಪರಿಗಣಿಸುವಾಗ, ನ್ಯಾಯಾಲಯದ ಡಿಕ್ರಿಯ ದಿನಾಂಕದಿಂದ ಕುಟುಂಬ ಪಿಂಚಣಿ ಸೌಲಭ್ಯವು ಪರಿಗಣಿತವಾಗತಕ್ಕದ್ದು. ಈ ಹಿನ್ನೆಲೆಯಿಂದಾಗಿ ದಿನಾಂಕ:-21.03.1988ರ ಅಧಿಕೃತ ಜ್ಞಾಪನದನುಸಾರ ಈ ಮುನ್ನ ವಿಸ್ತರಿಸಲಾಗಿದ್ದ ಸೌಲಭ್ಯಗಳನ್ನು ಪುನ: ಪರಿಷ್ಕರಿಸಿ ಸರಿದೂಗಿಸತಕ್ಕದ್ದು.

ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಗಳ ನಿಯಮ 117(2)ರಲ್ಲಿನ ಅವಕಾಶದ ರೀತ್ಯ, ಗರಿಷ್ಠ ರಜೆ ಮಂಜೂರಾತಿ ಅವಧಿಯು ಐದು ವರ್ಷಗಳನ್ನು ಮೀರತಕ್ಕದ್ದಲ್ಲ. ನೌಕರನು ಸೇವೆಯಿಂದ ಕಾಣೆಯಾಗಿರುವುದು ಮತ್ತು ನ್ಯಾಯಾಲಯದ ಡಿಕ್ರಿಯ ದಿನಾಂಕ; ಈ ಪ್ರಕರಣಗಳಲ್ಲಿ ಏಳು ವರ್ಷಗಳು ಮತ್ತು ಅದಕ್ಕೂ ಮೀರಿ ಗತಿಸುವುದರಿಂದಾಗಿ ಈ ಅವಧಿಯು ಅಸಾಧಾರಣ ರಜೆ ಎಂದು ಪರಿಗಣಿತವಾಗತಕ್ಕದ್ದಲ್ಲ. ಆದ್ದರಿಂದ ಏಳು ವರ್ಷಗಳು ಮತ್ತು ಅದಕ್ಕೂ ಮೀರಿದ ಅವಧಿಯನ್ನು ಕರ್ತವ್ಯ ದಲ್ಲಿಲದ ಅವಧಿ (Dies-non) ಎಂದೇ ನಿಯತಗೊಳಿಸತಕ್ಕದ್ದು.

(ಪದ್ಮಾವತಿ)
ವಿಶೇಷಾಧಿಕಾರಿ ಹಾಗೂ ಪದನಿಮಿತ್ತ
ಸರ್ಕಾರದ ಜಂಟಿ ಕಾರ್ಯದರ್ಶಿ,
ಆರ್ಥಿಕ ಇಲಾಖೆ (ವಿಶ್ರಾಂತಿ ವೇತನ).

ಗೆ,

1.ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ- ಈ ಅಧಿಕೃತ ಜ್ಞಾಪನವನ್ನು ಮುಂದಿನ ರಾಜ್ಯಪತ್ರದಲ್ಲಿ ಪ್ರಕಟಿಸಲು ವಿನಂತಿಯೊಂದಿಗೆ.

2. ಮಹಾಲೇಖಪಾಲರು (ಲೆಕ್ಕಪತ್ರ ಮತ್ತು ಹಕ್ಕುಗಳು), ಕರ್ನಾಟಕ, ಬೆಂಗಳೂರು.
3. ಉಪ ಮಹಾಲೇಖಪಾಲರು (ವಿಶ್ರಾಂತಿ ವೇತನ), ಕರ್ನಾಟಕ, ಬೆಂಗಳೂರು.
4. ಎಲ್ಲಾ ಸರ್ಕಾರದ ಕಾರ್ಯದರ್ಶಿಗಳು.
5. ಎಲ್ಲಾ ಇಲಾಖಾ ಮುಖ್ಯಸ್ಥರಿಗೆ.
6. ಖಜಾನೆ ನಿರ್ದೇಶಕರು, ಪೋಡಿಯಂ ಬ್ಲಾಕ್, ವಿ.ವಿ.ಗೋಪುರ, ಬೆಂಗಳೂರು.
7. ವಾರಪತ್ರಿಕೆ.